ಆ) ಹಾಗಿದ್ದಲ್ಲಿ ಅಪೆರಲ್ ಪಾರ್ಕ್‌ಗಾಗಿ ಎಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ,

ಇ) ರೈತರಿಗೆ ಪರಿಹಾರವಾಗಿ ಎಷ್ಟು ನಿವೇಶನಗಳನ್ನು ನೀಡಬೇಕಾಗಿದೆ,

ಈ) ಇಲ್ಲಿಯವರೆಗೆ ಎಷ್ಟು ನಿವೇಶನ ನೀಡಲಾಗಿದೆ?

ಶ್ರೀ ಅಪ್ಪಾ ಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) ಹೌದು ರಾಜ್ಯ ಸರ್ಕಾರವು ತನ್ನ ಆದೇಶ ಸಂ ವಾಕೈ 24 ಜಕೈಯೋ 2000, ದಿನಾಂಕ 15–7–2003 ರಲ್ಲಿ ದೊಡ್ಡಬಳ್ಳಾಪುರದಲ್ಲಿ ಅಪೆರಲ್ ಪಾರ್ಕ್ ಸ್ಥಾಪನೆಗೆ ಅನುಮೋದನೆ ನೀಡಿದ್ದು, ಅಪೆರಲ್ ಪಾರ್ಕ್ ಯೋಜನೆಯು ಕಾರ್ಯಾರಂಭಗೊಂಡಿದೆ

ಆ) ಅಪೆರಲ್ ಪಾರ್ಕ್ ಯೋಜನೆಗಾಗಿ ದೊಡ್ಡಬಳ್ಳಾಪುರ ತಾಲ್ಲೂಕಿನ ದರ್ಗಾಮರ ಅರೆಹಳ್ಳಿ ಗುಡ್ಡದಹಳ್ಳಿ, ಬಾಶೆಟ್ಟಿಹಳ್ಳಿ ಮತ್ತು ವರದನಹಳ್ಳಿ ಗ್ರಾಮಗಳಲ್ಲಿ 452 ಎಕರೆ 26 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ

ಇದಲ್ಲದೆ ಸುಮಾರು 800 ಎಕರೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ

ಇ) ಪರಿಹಾರವಾಗಿ ರೈತರಿಗೆ ನಿವೇಶನ ನೀಡುವ ನೀತಿಯನ್ನು ಮಂಡಳಿಯು ಕಲ್ಪಿಸಿರುವುದಿಲ್ಲ

ಈ) ಉದ್ಭವಿಸುವುದಿಲ್ಲ

868(344) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನಲ್ಲಿ ಎಡಿಬಿ ಯೋಜನೆಯಡಿಯಲ್ಲಿ ಕೈಗೆತ್ತಿಕೊಂಡಿದ್ದ ಕಾಮಗಾರಿಗಳಲ್ಲಿ ಕಾಜುಬಾಗ–ಸುಂಕೇರಿ ರಸ್ತೆಯ ಕಾಮಗಾರಿಗಳು ನ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಎಡಿಬಿ ಯೋಜನೆಯಡಿ ಕಾರವಾರ ನಗರದ 2ನೇ ಹಂತದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ರೂ 8 07 ಕೋಟಿ ವೆಚ್ಚದಲ್ಲಿ ಕರ್ನಾಟಕ ಭೂಸೇನಾ ನಿಗಮಕ್ಕೆ ಗುತ್ತಿಗೆ ಆಧಾರದ ಮೇಲೆ ಜುಲೈ 2006ರಲ್ಲಿ ವಹಿಸಲಾಗಿತ್ತು ಇದರಲ್ಲಿ ಕಾಜುಭಾಗ–ಸುಂಕೇರಿ ರಸ್ತೆ ಅಭಿವೃದ್ಧಿ ಕಾಮಗಾರಿ

ನೇರಿರುತ್ತದೆ ಕಾಮಗಾರಿಯ ಪ್ರಗತಿಯಲ್ಲಿ ತೀವ್ರ ವಿಳಂಬವಾಗಿದ್ದರಿಂದ ಹಾಗೂ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದ್ದರಿಂದ ಗುತ್ತಿಗೆಯನ್ನು ಡಿಸೆಂಬರ್ 2006ರಲ್ಲಿ ರದ್ದುಪಡಿಸಿ ಬ್ಯಾಂಕ್ ಗ್ಯಾರಂಟಿಯನ್ನು ನಗದೀಕರಿಸಲಾಗಿತ್ತು ಗುತ್ತಿಗೆ ರದ್ದತಿಯನ್ನು ಪ್ರಶ್ನಿಸಿ ಕರ್ನಾಟಕ ಭೂಸೇನಾ ನಿಗಮವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ಯಾವುದೇ ಮುಂದಿನ ಕ್ರಮ ಜರುಗಿಸದಂತೆ ಮಾನ್ಯ ಉಚ್ಚ ನ್ಯಾಯಾಲಯವು ಮಧ್ಯಂತರ ಆದೇಶ ನೀಡಿರುತ್ತದೆ ರಿಟ್ ಅರ್ಜಿಯನ್ನು ವಜಾಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ

869(404) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜೀವ್ ಗಾಂಧಿ ವಿದ್ಯುತ್ ಸೌಲಭ್ಯ ಯೋಜನೆಯಡಿಯಲ್ಲಿ ಮಂಜೂರಾದ ಉಪ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ನೀಡುವ ಕಾಮಗಾರಿಗಳ ಬಗ್ಗೆ ಟೆಂಡರ್ ಕರೆಯಲಾಗಿದೆಯೇ,

ಆ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು (ಮಾಹಿತಿ ನೀಡುವುದು)?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮೆಸ್ಕಾಂ ವ್ಯಾಪ್ತಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಿದ್ಯುದ್ದೀಕರಣ ಯೋಜನೆಯಡಿಯಲ್ಲಿ ಮಂಜೂರಾದ 2268 ಉಪ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವನ್ನು ಕಲ್ಪಿಸುವ ಕಾಮಗಾರಿಗಳಿಗೆ ಈಗಾಗಲೇ ಟೆಂಡರ್ ಕರೆಯಲಾಗಿದೆ

ಆ) ಸದರಿ ಟೆಂಡರ್‌ನ ತಾಂತ್ರಿಕ ಮತ್ತು ವಾಣಿಜ್ಯ ಬಿಡ್ಡುಗಳನ್ನು ತೆರೆಯಲಾಗಿದ್ದು, ಟೆಂಡರುಗಳ ಮೌಲ್ಯಮಾಪನವು ಪ್ರಗತಿಯಲ್ಲಿದೆ ಟೆಂಡರ್ ಪ್ರಕ್ರಿಯೆ ನಂತರ ಕಾಮಗಾರಿಯನ್ನು ಪ್ರಾರಂಭಿಸಲು ಪರಿಗಣಿಸಲಾಗುವುದು

872(903) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಯಾವ ಯಾವ ರಸ್ತೆಗಳ ಅಭಿವೃದ್ಧಿ ನಿರ್ವಹಣೆಯನ್ನು ತೆಗೆದು ಕೊಳ್ಳಲಾಗಿದೆ,